ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 16.5.98ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಅ) ಕರ್ನಾಟಕ ಮೀನುಗಾರಿಕೆ ಸಂರಕ್ಷಣೆ ಅಭಿವೃದ್ಧಿ ಮತ್ತು ನಿಯಂತ್ರಣ ವಿಧೇಯಕ, 1996

ಆ) ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ತಿದ್ದುಪಡಿ ವಿಧೇಯಕ, 1998.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಉದ್ಯೋಗದಲ್ಲಿ ಹಾಗೂ ಪ್ರೊಫೆಷನಲ್ ಕೋರ್ಸ್ ಗಳಲ್ಲಿರುವ ಪ್ರಾದೇಶಿಕ ಅಸಮಾನತೆಯನ್ನು ತೆಗೆದುಹಾಕುವ ಬಗ್ಗೆ

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಉಪಾಧ್ಯಕ್ಷರೆ, ಹೋದ ವರ್ಷ ಕೂಡ ಶೂನ್ಯ ವೇಳೆಯಲ್ಲಿ ಪ್ರಶ್ನೆ ಕೇಳಿದ್ದೆವು. ಇದರ ಮೇಲೆ ಹೆಚ್ಚು ಮಾತನಾಡತಕ್ಕಂತಹ ಅವಕಾಶ ಸಿಗಲಿಲ್ಲ. ಹೋದ ವರ್ಷ ಮೂರು ವರ್ಷಗಳಿಂದ ಈ ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ಯಾವ ತರಹ ಎಂಪ್ಲಾಯ್‌ಮೆಂಟ್‌ನಲ್ಲಿ ಮತ್ತು ಪ್ರೊಫೆಷನಲ್ ಕೋರ್ಸ್ ಬಗ್ಗೆ ಆಯಾ ವಿಭಾಗದಲ್ಲಿ ಅಲ್ಲಲ್ಲಿ ಕೆಲಸಗಳಿಗೆ ತೆಗೆದುಕೊಳ್ಳತಕ್ಕಂತಹ ವ್ಯವಸ್ಥೆ ಇದೆ. ಅದರ ಬಗ್ಗೆ ಸರ್ಕಾರದವರು ಹುಬ್ಬಳ್ಳಿಯಲ್ಲಿ ಒಂದು ಕ್ಯಾಬಿನೆಟ್ ಮೀಟಿಂಗ್ ಮಾಡಿ ಉತ್ತರ ಕರ್ನಾಟಕದವರಿಗೆ ಬಹುಶಃ ಆ ಭಾಗದವರಿಗೆ ಕುಷಿ ಮಾಡುವುದಕ್ಕೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡರು ಆದರೆ ಈ ತನಕ ಆ ಕಡೆ ಗಮನ ಹರಿಸಿಲ್ಲ. ಇದರ ಬಗ್ಗೆ ಮೀಟಿಂಗ್ ಕೂಡ ನಾವು ಮತ್ತು ಡಾ॥ ಮಲಕರೆಡ್ಡಿಯವರು ಅಲ್ಲಿದ್ದಾಗ ಮೀಟಿಂಗ್ ಕರೆಯುತ್ತೇವೆ ತಮ್ಮ ಸಲಹೆಗಳನ್ನೂ ಕೂಡ ಹೇಳಿ ಮುಂದಿನ ವರ್ಷದ ಅಧಿವೇಶನ ಕಾಲಕ್ಕೆ ಹೊಸ ವ್ಯವಸ್ಥೆ ಮಹಾರಾಷ್ಟ್ರದಲ್ಲಿ ಯಾವ ತರಹ ಇದೆ ಅಂತಹ ವ್ಯವಸ್ಥೆ ಇಲ್ಲಿ ಕೂಡ ಜಾರಿಗೆ ತರುತ್ತೇವೆಂದು ಹೇಳಿದ್ದರು. ಈ ತನಕ ಸರ್ಕಾರ ಆ ಕಡೆ ಗಮನ ಹರಿಸುವುದು ಅಲ್ಲ, ಮಾಡುವುದಕ್ಕೇ ತಯಾರಿಲ್ಲ. ಅದರ ಸಲುವಾಗಿ ಮಾನ್ಯ ನಾಣಯ್ಯನವರು ಹೇಳಿದ್ದರು ಮುಖ್ಯ ಮಂತ್ರಿಯವರು ಇಲ್ಲ, ಉತ್ತರ ಯಾರಾದರೂ ಹೇಳಬೇಕೆಂದು ಕೇಳಿಕೊಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವೈಜನಾಥ ಪಾಟೀಲರು ಈ ವಿಚಾರವನ್ನು ಪದೇ ಪದೇ ಪ್ರಸ್ತಾಪ ಮಾಡಿದ್ದಾರೆ. ಪ್ರಾದೇಶಿಕ ಅಸಮಾನತೆ ಉಂಟಾಗುತ್ತಿದೆ, ಮತ್ತು ಆ ಭಾಗದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ, ವಿದರ್ಭದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಮಾಡಿರತಕ್ಕಂತಹ ಆಯ ಬೋರ್ಡ್‌ಗಳ ವ್ಯಾಪ್ತಿಗಳಿಗೆ ಅನುಗುಣವಾಗಿ ರೀತಿಯಲ್ಲಿ ಕಾನೂನು ತಂದು ಮುಂದಿನ ಶೈಕ್ಷಣಿಕ ವರ್ಷದಲ್ಲಾದರೂ